"ನೋಡಿ ಮಾದೇಶ್, ನಮ್ಮ ದೇಶದಲ್ಲಿ ಇಂಗ್ಲಿಷ್ ಕಥೇನೆ ಇಷ್ಟು ಕಂಡ್ರಿ. ಪೂರ ತಿಳಿದಿರೋಲ್ಲ. ಅರ್ಧಂಬರ್ಧ ತಿಳಿದಿರೋರೆ ಜಾಸ್ತಿ. ಕರ್ಮಕ್ಕೆ ಇಂತೋರು ಅಧಿಕಾರದ ಸೀಟಿನಲ್ಲಿ ಇರುತ್ತಾರೆ. ಇಂತ ಸಮಯದಲ್ಲಿ ರೇಜಿಗೆ ಜಾಸ್ತಿ" ಎಂದು ಸಮಾಧಾನ ಹೇಳಿ ಕಳುಹಿಸಿದ್ದರು. ಇದಾದ ಮೇಲೆ ಮಾದೇಶ ಇಂಗ್ಲಿಷ್ ಅನ್ನು ಡ್ಯೂಟಿಯಿಂದ ದೂರವಿರಿಸುವ ನಿರ್ಧಾರಕ್ಕೆ ಬಂದಿದ್ದ. ಆದರೂ ಇವನ ಇಂಗ್ಲಿಷ್ ಮೇಲಿನ ಹಿಡಿತ ಜೊತೆಯಲ್ಲಿರುವವರಿಗೆ ತಿಳಿದ ವಿಚಾರವಾಗಿದ್ದರಿಂದ, ಆಗಾಗ ಅವನ ಸಹಾಯವನ್ನು ಕೇಳಿ ಪಡೆಯುತ್ತಿದ್ದರು. ಮೇಲಾಧಿಕಾರಿಗಳಿಗೆ ಇಂಗ್ಲಿಷ್ ವಿಚಾರದಲ್ಲಿ ಸಹಾಯ ಮಾಡುವಾಗಂತೂ ಬಹಳ ಎಚ್ಚರದಿಂದ ಇರುವುದನ್ನು ಅಭ್ಯಾಸ ಮಾಡಿಕೊಂಡಿದ್ದ.

ಇಲ್ಲಿ ನೋಡಿದ್ರೆ, ಮತ್ತೆ ಇಂಗ್ಲಿಷ್! ಇದೊಳ್ಳೆ ಕತೆ ಆಯಿತಲ್ಲ ಅಂದುಕೊಂಡ. ಡಿವೈಎಸ್ಪಿ ಆಫೀಸ್‌ನಲ್ಲೇ ಡ್ಯೂಟಿ ಮಾಡು ಎಂದ ಎಸ್ಐಗೆ ಸೆಲ್ಯೂಟ್ ಹೊಡೆದು ಹೊರಬರುತಿದ್ದ ಮಾದೇಶನಿಗೆ ನಗು ಬಂತು. ಏಕೆಂದರೆ 'ಪಕ್ಡ್' ಪದದ ಮೂಲ 'ಫಕ್ಡ್' ಅಂತ ಹೊಳೆಯಿತು ಅವನಿಗೆ. ಮರುಕ್ಷಣವೇ ಈ ಡಿವೈಎಸ್ಪಿ ಜೊತೆ ಹೇಗಪ್ಪೋ ಹೆಣಗೋದು ಅಂತು ಚಿಂತೆನೂ ಅಯಿತು.

ಡಿವೈಎಸ್ಪಿ ರಾಜಪ್ಪನವರ ಇಂಗ್ಲಿಷ್ ಬೈಗುಳಗಳ ಮೂಲ ಅವರ ಕಾಲೇಜು ಓದುತ್ತಿರೋ ಮಗಳು ಅಂತ ಬಹಳ ಬೇಗ ಮಾದೇಶನಿಗೆ ತಿಳಿಯಿತು. ಅವರ ಜೊತೆ ಡ್ಯೂಟಿಗೆ ಅಸೈನ್ ಆದ ಮಾರನೇ ದಿನವೇ ಅವರ ಮನೆಗೆ ಹೋಗಬೇಕಾದ ಸನ್ನಿವೇಶ ಒದಗಿತ್ತು. ಅಂದು ಬೆಳಗಿನ ಹತ್ತಕ್ಕೆ ಫೋನು ಮಾಡಿದ ರಾಜಪ್ಪ, "ಯೇ ಮಾದೇಸ, ಬಾರೊ ಬೇಗ. ಸೂಳೆ ಮಗ ಎಸ್‌ಪಿ ಅದೇನೋ ವಾಟ್ಸ್‌ಅಪ್ ಕಳ್ಸೋನೆ ಕಂಡ್ಲಾ. ಕಾನ್ಫಿಡನಿಸಿಯಲ್ ಅಂತ ಬೇರೆ ಆಕೋನೆ. ಮನೆಗೆ ಬಾರೋ". ಸರಿ ಬೈಕ್ ಅನ್ನು ಅವರ ಮನೆ ಕಡೆ ತಿರುಗ್ಸಿ ಹೊರಟಿದ್ದ. ಅವರ ಮನೆ ಗೇಟ್ ಬಳಿ ಇವಳು ನಿಂತಿದ್ದಳು. "ಫಕಿಂಗ್ ಪೀಪಲ್. ಬ್ರೂಟ್ಸ್. ಆಸ್ ಹೋಲ್ಸ್" ಎನ್ನುತ್ತಿದ್ದಳು ಫೋನಿನಲ್ಲಿ. ಮಂಡಿ ಮೇಲೆ ಬರುವ ಚಡ್ಡಿ ಬೇರೆ ಹಾಕಿದ್ದ ಅವಳು ಗೇಟಿಗೆ ಅಡ್ಡಲಾಗಿ ನಿಂತಿದ್ದ ಕಾರಣ, "ಮೇಡಂ ಸಾಹೇಬ್ರೂ" ಅಂತ ಸ್ವಲ್ಪ ಮುಜುಗರದಿಂದ ಕೇಳಿದ್ದ. ಆಕೆ ಸ್ವಲ್ಪವೇ ದೂರ ಸರಿದು ನಿಂತು ಬಾಗಿಲ ಕಡೆ ತೋರಿಸಿ, ತನ್ನ ಮಾತು ಮುಂದುವರಿಸಿದ್ದಳು. "ಸ್ಕ್ರೂ ದೆಮ್ ಯಾರ್" ಅನ್ನುತ್ತಿದ್ದಳು. ಅದನ್ನು ಕೇಳಿದ ತಕ್ಷಣ ನಿನ್ನೆ ರಾಜಪ್ಪನವರು ಹೇಳಿದ್ದ 'ಕ್ರೂ ದಮ್' ಪದ ಅರ್ಥ ಹೊಳೆಯಿತು ಮಾದೇಶನಿಗೆ.

ಹಾಗೂ ಹೀಗೂ ರಾಜಪ್ಪರ ವಿಶೇಷ ಇಂಗ್ಲಿಷ್ ಬೈಗುಳ ಡಿಕ್ಷನರಿ ಸಿದ್ಧವಾಗಿಟ್ಟುಕೊಂಡ ಮೇಲೆ ಮಾದೇಶನಿಗೆ ಸ್ವಲ್ಪ ನಿರಾಳ ಅನ್ನಿಸಿತು. ಅವರ ಕೋಪದ ಅರ್ಥ ತಿಳಿಯಲು ಅವನಿಗೆ ಬೈಗುಳಗಳ ನೈಜ ಉಚ್ಚಾರಣೆ ಬೇಕಿತ್ತು. ಈಗ ತೊಂದರೆಯಿರಲಿಲ್ಲ. ಇಲ್ಲದಿದ್ದರೆ ಅವರ ಕೋಪಕ್ಕೂ ಅವರ ಬಳಸೋ ಪದಗಳಿಗೂ ತಾಳೆ ಆಗದೆ, ಅವನ ಮೆದುಳು ಮುಷ್ಕರ ಹೂಡುತಿತ್ತು. ರಾಜಪ್ಪರ ಬ್ರೈನ್ ಸೃಷ್ಟಿಸುತಿದ್ದ ಬೈಗುಳಗಳ ಮೂಲ ಸಿಕ್ಕ ಮೇಲಂತೂ ಅವನು ಇನ್ನೂ ರಿಲ್ಯಾಕ್ಸ್ ಆಗಿಬಿಟ್ಟ. ಕಾಲೇಜು ಹುಡುಗರು ಬಳ್ಸೋ ಇಂಗ್ಲಿಷ್ ಬೈಗುಳಗಳ ಕಡೆಗೆ ವಿಶೇಷ ಗಮನವಹಿಸಿದ್ದ. ಕಾಲೇಜಿನಲ್ಲಿ ಇದ್ದಾಗ ಅವನಂತೂ ಇಂತಹ ಪದಗಳನ್ನು ಬಳಸಿದ್ದೇ ಇಲ್ಲ. ಕೊನೆ ಪಕ್ಷ ಬೋಳಿ ಮಗ ಸೂಳೆ ಮಗ ಅನ್ನೋದು ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಎಲ್ಲೋ ಅಪರೂಪಕ್ಕೆ ಒಮ್ಮೆ 'ಈಡಿಯಟ್' ಅನ್ನೋದು ಬರುತಿತ್ತು. ಕಾಲೇಜು ಮುಗಿಸೋ ಹೊತ್ತಿಗೆ 'ಶಿಟ್' ಪದದ ಬಳಕೆ ಕಲಿತಿದ್ದ.

ಕೆಲಸಕ್ಕೆ ಸೇರಿದ ಮೇಲಂತೂ ಅವನಿಗೆ ಬೈಗುಳಗಳ ರಾಶಿ ಸಿಕ್ಕಿತು. ಪೊಲೀಸ್ ಕಾಲೇಜಿನಲ್ಲಿ ಟ್ರೈನರ್‌ಗಳು, ಟೀಚರ್‌ಗಳು ಬಾಯಿಬಿಟ್ಟರೆ ಬೈಗುಳಗಳೇ ಇರುತ್ತಿದ್ದವು. ಅವರು ಇರುವುದೇ ಬೈಯೋದಿಕ್ಕೆ ಅನ್ನೋ ಹಾಗಿತ್ತು. ಎರಡು ತಿಂಗಳು ಒದ್ದಾಡಿದ. ಮನೆಯಲ್ಲಿ ಎಂದಿಗೂ ಅಪ್ಪನಾಗಲೀ ಚಿಕ್ಕಪ್ಪನಾಗಲೀ ಹೀಗೆಲ್ಲಾ ಬೈದಿದ್ದೇ ಇಲ್ಲ. ಯಾರಾದರೂ ಹುಡುಗಿಯರನ್ನು ಹೋಗೇ ಅಂದಿದ್ದು ಅಮ್ಮನ ಕಿವಿಗೆ ಬಿದ್ದರೆ, ಬೆನ್ನ ಮೇಲೆ ಎರಡು ಬೀಳುತ್ತಿದ್ದವು. 'ಹೋಗವ್ವ ಬಾರವ್ವ' ಮಾತ್ರ ಹೇಳಲು